ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಒಟ್ಟು 11 ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದು ಗುರುತಿಸಲಾಗಿದೆ.

ಆ) 1. ಮಡಿಕೇರಿಯಲ್ಲಿ ಪ್ರವಾಸಿಗರ ಅನುಕೂಲತೆಗೆ ಪ್ರವಾಸಿ ಮಾಹಿತಿ ಕೇಂದ್ರವನ್ನು ತೆರೆಯಲಾಗಿದೆ.

2. ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಮಡಿಕೇರಿಯಲ್ಲಿ ಹೋಟೆಲ್ ಮಯೂರ ವ್ಯಾಲಿವ್ಯೂವನ್ನು ನಿರ್ವಹಿಸುತ್ತಿದೆ.

3. ಅಬ್ಬಿ ಜಲಪಾತಕ್ಕೆ ರೈಲಿಂಗ್ ಅಳವಡಿಸಲಾಗಿದೆ.

4. ಮಡಿಕೇರಿ ರಾಜ್ ಸೀಟ್‌ನ ರಸ್ತೆ ಅಭಿವೃದ್ಧಿಪಡಿಸಲಾಗಿದೆ.

5. ಕೆಲವು ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಇನ್ನೂ ರೂ.10.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಇ) 1. ಅಬ್ಬಿ ಜಲಪಾತಕ್ಕೆ ರೈಲಿಂಗ್ ಅಳವಡಿಸುವ ವೆಚ್ಚ ರೂ. 1.60 ಲಕ್ಷ.

2. ರಾಜನೀಟ್ ರಸ್ತೆ ಅಭಿವೃದ್ಧಿಗೆ ರೂ. 5.00 ಲಕ್ಷ

ಈ) ವೀರಾಜಪೇಟೆಯನ್ನು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಈ ಸ್ಥಳವನ್ನು ಬಿ ಗುಂಪಿನಲ್ಲಿ ಸೇರಿಸಲಾಗಿದೆ.

ವೀರಾಜಪೇಟೆ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯಗಳ ಕುರಿತು.

1009 - ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು; (ಅಂಶಗಳ ವಿವರ ನೀಡುವುದು)

ಆ) ವೀರಾಜಪೇಟೆ ತಾಲ್ಲೂಕಿಗೆ ಪಶುಸಂಗೋಪನಾ ಇಲಾಖೆಯ ವತಿಯಿಂದ ಯಾವ ಯಾವ ಬಾಬಿನಲ್ಲಿ 1994-95, 1995-96ಹಾಗೂ 1996-97ನೇ ಸಾಲಿನಲ್ಲಿ ವೆಚ್ಚ ಮಾಡಿದ ಹಣದ ವಿವರ ನೀಡುವುದು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1. ಪಶು ಆಸ್ಪತ್ರೆ 63

2. ಪಶುಚಿಕಿತ್ಸಾಲಯ 96

3. ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 10

4. ಸಂಚಾರಿ ಪಶುಚಿಕಿತ್ಸಾ ಘಟಕ 01

ಆ) ವೀರಾಜಪೇಟೆ ತಾಲ್ಲೂಕಿನ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ಆದ ವೆಚ್ಚ (ರೂ.ಲಕ್ಷಗಳಲ್ಲಿ)

ಕ್ರಸಂ.	ವಿವರ	94-95	95-96	96-97
1)	ಯೋಜನೆ	15.42	18.93	19.52
2)	ವಿಶೇಷ ಘಟಕ ಯೋಜನೆ	00.60	00.37	00.18
3)	ಗಿರಿಜನ ಉಪ ಯೋಜನೆ	00.84	01.00	00.23

ರಸ್ತೆ ದುರಸ್ತಿ ಸಲುವಾಗಿ ವೀರಾಜಪೇಟೆ ತಾಲ್ಲೂಕಿಗೆ ಬಿಡುಗಡೆಯಾದ ಹಣ.

1010 - ಶ್ರೀ ಹೆಚ್.ಡಿ. ಬಸವರಾಜ್(ವೀರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ರಲ್ಲಿ ರಸ್ತೆ ದುರಸ್ತಿ ಸಲುವಾಗಿ ಪ್ರತಿ ವಿಧಾನಸಭಾ ಸದಸ್ಯರಿಗೆ 30 ಲಕ್ಷ ನೀಡುವುದಾಗಿ ಸರ್ಕಾರ ಘೋಷಿಸಿದ್ದು, ಕೇವಲ ಹತ್ತು ಲಕ್ಷ ವೀರಾಜಪೇಟೆ ಕ್ಷೇತ್ರಕ್ಕೆ ಬಿಡುಗಡೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಇತರ ಕ್ಷೇತ್ರಗಳ ಸದಸ್ಯರಿಗೆ ಇನ್ನೂ ಹೆಚ್ಚಿನ ಹಣ ಬಿಡುಗಡೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಸರ್ಕಾರ 1995-96ರಲ್ಲಿ ಪ್ರತಿ ವಿಧಾನಸಭಾ ಸದಸ್ಯರಿಗೆ ಒಟ್ಟು ಎಷ್ಟು ಮೊತ್ತ ಈ ಬಾಬ್ತುನಲ್ಲಿ ಬಿಡುಗಡೆ ಮಾಡಿದೆ. (ವಿವರ ನೀಡುವುದು).

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿನ ರಸ್ತೆಗಳ ಅಭಿವೃದ್ಧಿಗೆ ಒಟ್ಟಾರೆ 30 ಲಕ್ಷ ರೂ. ಅನುದಾನವನ್ನು 1995-96ನೇ ಸಾಲು ಸೇರಿದಂತೆ, ಪ್ರತಿ ವರ್ಷ 10 ಲಕ್ಷ ರೂ. ಬಿಡುಗಡೆ ಮಾಡಲಾಗುತ್ತಿದೆ. ಕಳೆದ ವರ್ಷ 10 ಲಕ್ಷ ರೂ. ಬಿಡುಗಡೆಯಾಗಿದ್ದು ಮುಂಬರುವ ಸಾಲಿನಲ್ಲಿ 10 ಲಕ್ಷ ರೂ. ಬಿಡುಗಡೆ ಮಾಡಿದ್ದು, ಮುಂಬರುವ ಸಾಲಿನಲ್ಲಿ 10 ಲಕ್ಷ ರೂ. ಬಿಡುಗಡೆ ಮಾಡಲಾಗುವುದು.

ಆ) ಈ ತಾರತಮ್ಯ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.